ಬಿ. ಚಂದ್ರೇಗೌಡ, ಬೆಂಗಳೂರು
*ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ಎಂದರು ಬಸವಣ್ಣ. ಇಂದಿನ ರಾಜಕಾರಣಿಗಳು?*



ಬಸವಣ್ಣನವರ ಭಾವಚಿತ್ರಕ್ಕೆ ಎಡೆ ಉಂಟು; ತತ್ವಗಳಿಗೆ ಎಡೆ ಇಲ್ಲ ಎಂದರು!

ಪವನಕುಮಾರ್ ಎಂ.ಆರ್. ಬಳ್ಳಾರಿ
*ಮಂಗಳಾರತಿ ದೇವರಿಗೆ ಮಾಡಿದರೆ ಒಳ್ಳೆಯದು, ಮನುಷ್ಯರಿಗೆ ಮಾಡಿದರೆ ಕೆಟ್ಟದು. ಹೀಗೇಕೆ?*
ಹಾಗೇನಿಲ್ಲ; ಸತಿಯಿಂದ ಸರ್‍ಯಾಗಿ ಮಂಗಳಾರತಿ ಮಾಡಿಸಿಕೊಂಡು ಉದ್ಧಾರವಾದ ಪತಿಯರಿದ್ದಾರೆ.

ರತ್ನಜ, ಮೈಸೂರು
*ಮದುವೆಯಲ್ಲಿ ಮಂಗಳಸೂತ್ರಕ್ಕೆ ಮೂರು ಗಂಟು ಹಾಕಿಸುವ ಐತಿಹ್ಯವೇನು ರಾಂಜೀ?*
ಸಂಸಾರ ಸಾಗಿಸಲು ಅಪ್ಪನ ಗಂಟು, ಮಾವನ ಗಂಟು, ತನ್ನ ಗಂಟು ಅಷ್ಟೂ ಬೇಕಾಗಬಹುದು ಎಂಬುದರ ಮುನ್ಸೂಚನೆ.

ಫಾಲನೇತ್ರ ಸಜ್ಜನ, ಶಿರಸಿ
*ವಿಜ್ಞಾನಕ್ಕೆ ಸಾವಿರ ಥ್ಯಾಂಕ್ಸ್ ಹೇಳಬೇಕು. ಯಾರ ಮೂಲಕ ಹೇಳಲಿ?*



ಮಕ್ಕಳ ಮೂಲಕ; ಹೀಗೆ ಮಾಡಿದರೆ ಪೀಳಿಗೆಗಳೇ ವಿಜ್ಞಾನದ ಮಹತ್ವ ತಿಳಿದಾವು.

ರಮಾನಂದ ಶರ್ಮ, ಬೆಂಗಳೂರು
*ಇಲ್ಲೊಬ್ಬಳು ಮಹಿಳೆಗೆ ಬಂಗಾರದ ಆಭರಣಗಳು ಅಲರ್ಜಿಯಂತೆ...?*
ಅದು ಅರ್ಧವಾಕ್ಯ; ಮುಂದಿನದು ಕೇಳಿ – ಆಕೆಗೆ ವಜ್ರದ್ದು ಬಹಳ ಪ್ರಿಯವಂತೆ, ಆದ್ದರಿಂದ ಬಂಗಾರ ಅಲರ್ಜಿಯಂತೆ!

ಎಂ.ಎ. ಕುಮಾರ್, ಬೆಂಗಳೂರು
*ಗಂಡು ದೇವರ ಅವತಾರಕ್ಕೂ, ಹೆಣ್ಣು ದೇವರ ಅವತಾರಕ್ಕೂ ಏನು ವ್ಯತ್ಯಾಸ?*
ದೇವ ಹೇಗೆ ಬೇಕಾದರೂ ಅವತರಿಸುವನು; ದೇವಿ ಕಾಳಿಯಾಗಿ ಬಂದರೂ ಫುಲ್ ಮೇಕಪ್, ಮ್ಯಾಚಿಂಗ್ ಸ್ಯಾರಿಬ್ಲೌಸ್!

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಅಂದು ಗುರುಕುಲಗಳಲ್ಲಿ ಗುರುಗಳು ಕುಳಿತು ಪಾಠ ಮಾಡುತ್ತಿದ್ದರು. ಇಂದು ಮೇಷ್ಟ್ರುಗಳು ಶಿಷ್ಯರ ಮುಂದೆ ನಿಂತು ಪಾಠ ಮಾಡುವರೇಕೆ?*
ಆಗಿನದು ಲೆವೆಲ್ ಹೆಡೆಡ್ ಟೀಚಿಂಗ್; ಈಗಿನದು ಹೈ ಲೆವೆಲ್ ಟೀಚಿಂಗ್ ಅಂತೆ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಇಲ್ಲೊಬ್ಬ ಹಿರಿಯರು ತಮ್ಮ ಶ್ರೀಮತಿಯನ್ನು ಪರಿಚಯಿಸುವಾಗ 'ನನ್ನ ಕುಟುಂಬ' ಎಂದು ಸಂಬೋಧಿಸಿದರಲ್ಲಾ, ಇದರ ಅರ್ಥವೇನು?*
'ಕುಟುಕುತ್ತಾಳೆ ತುಂಬಾ' ಎನ್ನುವುದರ ಹ್ರಸ್ವ ರೂಪವಂತೆ.

ಅಜಯ್, ಬೆಂಗಳೂರು
*ಪಾಕಕಲೆಯಲ್ಲಿಯೂ ಭೀಮಪಾಕ, ನಳಪಾಕ ಅಂತಾರಲ್ಲಾ, ಇಲ್ಲಿಯೂ ಪುರುಷ ಪ್ರಧಾನವೆ?*
ಭೀಮ ಎಂದರೆ ಭೀಕರ ಎಂದರ್ಥ; ನಳ ಎಂದರೆ ನಲ್ಲಿ; ಅಡಿಗೆ ಕೆಟ್ಟದಾಗಿದ್ದರೆ ಭೀಮಪಾಕ, ನೀರಾಗಿದ್ದರೆ ನಳಪಾಕ!

ಟಿ.ಎ. ನಾರಾಯಣಮೂರ್ತಿ, ಮೈಸೂರು
*ಪ್ರಶ್ನೆಗಳಿಗೆ ಲೀಲಾಜಾಲವಾಗಿ ಉತ್ತರಿಸುವ ನಿಮಗೆ ಎಂದಾದರೂ ಸಾಕಪ್ಪಾ ಈ ಪ್ರಶ್ನೆಗಳ ಹಾವಳಿ ಅನಿಸಿತ್ತೆ?*
ಅದು ಹಾವಳಿಯಲ್ಲ; ಸುಂದರ ಆವಳಿ. ಮೀನಿಗೆ ನೀರು ಬೇಸರವಾದಂದು ನನಗೆ ಪ್ರಶ್ನೆಗಳು ಬೇಸರ ತಂದಾವು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮನೆಗೆ ಬಂದ ಅತಿಥಿಗಳು ದೇವರ ಸಮಾನವಂತೆ. ನಿಜವೇ?*
ಸ್ತೋತ್ರ, ನೈವೇದ್ಯ, ಧ್ಯಾನ ವಾಹನಾದಿ ಉಪಚಾರಗಳನ್ನು ನೀಡಿ, ಕೆಲವೊಮ್ಮೆ ಅಷ್ಟೋತ್ತರವನ್ನೂ ಮಾಡುವುದರಿಂದ, ನಿಜ.

ಪಿ.ಜಿ. ರಾಜ್, ಶಿವಮೊಗ್ಗ
*ಚಿಂತೆಯಿಂದ ಚಿತೆ ನಿರ್ಮಾಣ ಆಗುತ್ತದೆ. ಮದುವೆಯಿಂದ?*
ಉಚಿತೆ!

## ಬಹುಮಾನಿತ ಪ್ರಶ್ನೆ

ಎ.ಪಿ. ರಂಗನಾಥ್, ಮೈಸೂರು
*ಟೆನ್ ಕಮ್ಯಾಂಡ್‌ಮೆಂಟ್ಸ್ ಎಂಬುದು ಕ್ರಿಶ್ಚಿಯನ್ನರಲ್ಲಿದೆ; ಮುಸ್ಲಿಮರಲ್ಲಿದೆ. ಹಿಂದೂಗಳಲ್ಲಿ ಇದೆಯೆ? ಇದ್ದರೆ ಯಾವುದು?*
ಶಿಶುವಿನಲ್ಲಿ ಮಾತೃವಿನ ಅಂಗಗಳು ಇವೆಯೆ ಎಂದು ಕೇಳಿದಂತಾಯಿತು. ಎಲ್ಲ ಧರ್ಮಗಳ ವಿಷಯ ಒಂದೇ; ಕವರ್‌ಪೇಜ್ ಬೇರೆ.

ಪಿ.ಜೆ. ರಾಘವೇಂದ್ರ, ಮೈಸೂರು
*ಮನುಷ್ಯತ್ವದಲ್ಲಿ 'ಮನು' ಇರುವುದರಿಂದ ವಿಚಾರವಾದಿಗಳು ಮನುಷ್ಯತ್ವವನ್ನೇ ವಿರೋಧಿಸುತ್ತಾರಂತೆ?*
ಮನು ಮತ್ತು ಮೆನು– ಈಗ ಇವೆರಡರದ್ದೇ ಗದ್ದಲ.

ಕೆ.ಎಂ. ವಿಭೂತಿ, ಹರಿಹರ
*ಮೊಬೈಲ್ ಯುಗದಲ್ಲಿ ತರುಣ ತರುಣಿಯರು ಇಪ್ಪತ್ತರ ಹರೆಯದಲ್ಲೇ ಎಪ್ಪತ್ತರ ವೃದ್ಧರಂತೆ ವರ್ತಿಸುವರಲ್ಲ, ಏಕೆ?*
ಸ್ಕೂಲ್‌ಬ್ಯಾಗಿನಿಂದ ಬಾಗು, ಸ್ಮಾಲ್ ಸ್ಕ್ರೀನ್ ವೀಕ್ಷಣೆಯಿಂದ ಕನ್ನಡಕ, ಹೆಡ್‌ಸೆಟ್‌ನ ಗಟ್ಟಿದನಿಯಿಂದ ಅರೆಕಿವುಡು ಬಂದಿರುತ್ತದಲ್ಲ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ಬದುಕಿನಲ್ಲಿ ಗೆಲುವಿನ ಹಾದಿ ತೋರಿಸುವುದು ಜ್ಞಾನವೋ, ಲೋಕಜ್ಞಾನವೋ ಸಾರ್?*
ಭವಸಾಗರ ದಾಟುವುದರ ಬಗ್ಗೆ ಭಾಷಣ



ಮಾಡಿದವನು ಹೊಳೆ ದಾಟಲಾಗದೆ ಸತ್ತನಂತೆ. ವೇದಕ್ಕಿಂತ ವಿಧ ಮುಖ್ಯ.

ಎಸ್.ಎ. ಮೋಹನರಾಜು, ಶಿವಮೊಗ್ಗ
*ತೂಕವಿಲ್ಲದ ಮಾತು ಮತ್ತು ಸಂದರ್ಭಕ್ಕೊಂದು ನಗು ಸೂಸುವವರನ್ನು ಏನೆನ್ನಬೇಕು?*
ಚೇಲಾ.

ಆರ್. ಮಧುಸೂದನ್, ಹಾಸನ
*ಮಹಿಳೆಯರನ್ನು 'ಮಹಿಳಾ ಮಣಿಗಳು' ಎನ್ನುವರಲ್ಲಾ, ಏಕೆ?*
ಮಣಿಗಳು ಅಲ್ಲ, ಮಣಿಯರು; ಅವರು ಯಾರಿಗೂ ಮಣಿಯರು ಎಂಬುದು ಸರ್ವವಿದಿತವಲ್ಲವೆ!

■ ರಾಮ್